Regd No M 1299 ... aded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 115] ಸೋಮವಾರ 15–3–48 [ಬಿಡಿ ಪ್ರತಿ 3 ಪೈ

ಧಾಳಿಕಾರರನ್ನು ಓಡಿಸಲಾಗುತ್ತೆ

ಚಾರಿಸ್ಟ್— ರಷ್ಯಾದ ರಾಜ್ಯವಿ ಸ್ತಾರಣಾ ನೀತಿಯನ್ನು ಅಮೇರಿಕಾ ಅಡ್ಡಗಟ್ಟುವುದೆಂದು ಮಾಜಿ ಸ್ಟೇಟು ಸೆಕ್ರೆಟರಿ ಬೈರ್ನ್ಸರು ಹೇಳಿದ್ದಾರೆ

o o

ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸಬೇಕೆಂಬುವದು ಅಂಗ್ಲೋ ಅಮೇರಿಕನ್ನರ ಕುತಂತ್ರವೆಂದು ಹೇಳಲಾಗಿದೆ

o o

ಮೈಸೂರು — ಶ್ರೀ ದುರ್ಗಾದೇವಿ ಜಾತ್ರೆಯ ಅಂಗವಾಗಿ ತಾ.॥ 16 ನಂಜಿ 7–45 ಕ್ಕೆ ನಜರಬಾದು ಪೋಲೀಸು ಸ್ಟೇಷನ್ ಸರ್ಕಲ್ಲಿನಲ್ಲಿ ಮಹಾವಂಗಳಾರತಿ ಏರ್ಪಡಿಸಲಾಗಿದೆಯೆಂದು ಕಾರ್ಯಕರ್ತರು ತಿಳಿಸುತ್ತಾರೆ

ನವದೆಹಲಿ ಮಾ 13 .... ಕಾಶ್ಮೀರದ ದಂಗಲಾಟೆ ಅಡಗಲು ಇನ್ನೂ 2–3 ತಿಂಗಳು ಬೇಕೆಂದೂ ಧಾಳಿಗಾರರನ್ನು ಸಂಪೂರ್ಣವಾಗಿ ಓಡಿಸಿ ಕಾಶ್ಮೀರಕ್ಕೆ ಆತಂಕವಿಲ್ಲದಂತೆ ಮಾಡಲಾಗುವದೆಂದೂ ರಕ್ಷಣಾಮಂತ್ರಿ ಪಾರ್ಲಿಮೆಂಟಿನಲ್ಲಿ ತಿಳಿಸಿದರು

o o

ಬೊಂಬಾಯಿ.... ಆಟಂ ಬಾಂಬ್ ತೋಟಿ ಇರಬೇಕೆಂದು ಪ್ರೊ॥ ವೆಲಾರ್ಟ್ ರವರು ಅಭಿಪ್ರಾಯಪಟ್ಟಿರುವರು

o o

ಅಳ್ವಾರು ರಾಜರು ತಮ್ಮ ದೇಶಕ್ಕೆ ಹಿಂತಿರುಗಿದರು.

o o

ಆಫ್ಘಾನಿಸ್ತಾನ ಅಮೇರಿಕಾವನ್ನು 10 ಕೋಟಿ ಡಾಲರ್ ಸಾಲಾಕೇಳಿದೆ.

ವಿಟೋಫೆರಿನ್

ಟ್ರೇಡ್ ITL ಮಾರ್ಕ್

ಎ. ಬಿ. ಡಿ. ವಿಟಮಿನ್ನುಗಳು ಮತ್ತು ದೇಹಪೋಷಣೆಗೆ ಬೇಕಾದ ಮುಖ್ಯ ಖನಿಜಗಳು. ಭಟ್ಟಿಇಳಿಸಿದ ರಾಗಿ ಮತ್ತು ಜೇನುತುಪ್ಪ ಇವುಗಳನ್ನೊಳಗೊಂಡು ತಯಾರಿಸಲ್ಪಟ್ಟ ಟಾನಿಕ್ ಔಷಧಿ ವಿಟೋಫೆರಿನ್ ಸೇವನೆಯಿಂದ ಮಕ್ಕಳ ಬೆಳವಣಿಗೆಗೂ, ಕಾಯಿಲೆಯಿಂದ ಎದ್ದು ಗುಣಮುಖರಾಗುತ್ತಿರುವವರಿಗೂ ಗರ್ಭಿಣಿ ಮತ್ತು ಬಾಣಂತಿಯರ ಪೋಷಣೆಗೂ ಅನುಕೂಲವಾದುದು.

"ವಿಟೋಫೆರಿನ್" ಜಾಯಿಲೆ ಒರದಂತೆ ನೋಡಿಕೊಳ್ಳುವ ಮನೆಯ ಕಾವಲುಗಾರ.

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಬಿಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd.

Malleswaram P. O. Bangalore

ಚಿಂತೆ ... ವ್ಯಕ್ತಿಯ ಜಾತಕದಲ್ಲಿ ಗ್ರಹಗಳ ಸ್ಥಿತಿಯಿಂದ)

ಮೇಷ — ಕಾರ್ಯಗಳಲ್ಲಿ ವಿಘ್ನ ಮನೋವ್ಯಥೆ ಗೆಳೆಯರೂ ಶತ್ರುಗಳಾಗುವರು

ವೃಷಭ — ಸಮಾಧಾನಕರವಾದ ರ: ಆರ್ಥಿಕ ಮುಗ್ಗಟ್ಟು ಇರುವುದು ; ಶಾರೀರಕ ಮಾನಸಿಕ ಸಂತಾಪ ಸ್ವಲ್ಪ ಮಟ್ಟಿಗೆ ಇರುತ್ತದೆ

ಮಿಥುನ— ಅಪಯಶಸ್ಸುಂಟಾಗುವ ರ ಆರ್ಥಿಕ ದೃಷ್ಟಿಯಲ್ಲಿ ಉತ್ತಮ ವ್ಯಯಾಧಿಕ

ಕರ್ಕಾಟಕ— ಶಾರೀರಕ ಮಾನಸಿಕ ತಿಗಳು ಉತ್ತಮವಿರುವುದಿಲ್ಲ. ಕೈಗಂಡ ಕಾರ್ಯಗಳು ನಿರಾಸೆ ಆಗುವುದು ಸ್ಪಷ್ಟ

ಸಿಂಹ — ಧನಹಾನಿ ಮಾನಹಾನಿ ಮನೋವ್ಯಾಕುಲತೆ.

ಕನ್ಯಾ.... ಮನಸ್ಸು ಸಮಾಧಾನದಲ್ಲಿ ತ್ತಿ ಧನಲಾಭವಿದೆ

ತುಲ.... ಹಿಡಿದ ಕಾರ್ಯಗಳಲ್ಲಿ ಜ ು, ಆರೋಗ್ಯಲಾಭ ಮನೋಶಾಂತಿ, ಆರ್ಥಿಕ ಲಾಭ

ವೃಶ್ಚಿಕ.... ಆರ್ಥಿಕ ಲಾಭ ವ್ಯವಹಾರದಲ್ಲಿ ಜಯ

ಧನಸ್ಸು .... ಶತ್ರುಭಯ ವ್ಯವಹಾರದಲ್ಲಿ ತೊಂದರೆ ಅಶುಭವಾರ್ತೆ ಕೇಳಬೇಕಾಗಿ ಬರಬಹುದು

ಮಕರ .... ಮನೋವ್ಯಥೆ ಹೆಚ್ಚು ದೆ ಖರ್ಚು ಹೆಚ್ಚು ಮನೆಯಲ್ಲಿ ಲಹ ವ್ಯವಹಾರದಲ್ಲಿ ವಿಘ್ನ

ಕುಂಭ.... ಆರೋಗ್ಯವುಂಟು ಧನ ಲಾಭವುಂಟು ಮಿತ್ರರ ಸಹಾಯವಿದೆ

ಮೀನ— ವ್ಯವಹಾರದಲ್ಲಿ ಕಿಂಚಿ ತ್ ಚಿಂತಾಸ್ಪದವಾಗಿರಬಹುದು ; ಆರ್ಥಿಕ ಮುಗ್ಗಟ್ಟೇನೂ ಇರುವುದಿಲ್ಲ

ವುಡ್ ಲ್ಯಾಂಡ್ಸ್

ಕಿಕ್ಕಿರಿದ ಜನಸಂದಣಿಯಿಂದ ತುಂಬಿದ, ನಲಿಯುವ 4 ನೆ ವಾರ

ಷೆನಾಯ್

(ಆಮೋಘ ಹಿಂದೀ ಚಿತ್ರ)

— ಭೂಮಿಕೆಯಲ್ಲಿ —

ಇಂದುಮತಿ, ರೆಹಾನಾ

ನಾಜಿರ್ ಖಾ

ಪ್ರತಿ ದಿನ 3 ಆಟಗಳು

Evershine Release —

ಗಾಂಧೀಜಿಯವರ ದಿವ್ಯವಾಣಿ—

ಸೋಷಿಯಲಿಜಂ ಎಂದರೇನು !

ಸಮಾಜದಲ್ಲಿ ಜನರೆಲ್ಲರೂ ಸಮಾನರೇ, ಯಾರೂ ಹೆಚ್ಚಲ್ಲ, ಯಾರೂ ಕಡಿಮೆಯಿಲ್ಲ ; ತಲೆಯು ಮೇಲಿರುವುದರಿಂದ ಅದು ಹೆಚ್ಚಿನದಲ್ಲ ; ಪಾದಗಳು ಕೆಳಗಿರುವುದರಿಂದ ನೆಲವನ್ನು ಸೋಕುವುದರಿಂದ ಅದು ಕೀಳಲ್ಲ. ದೇಹದಲ್ಲಿಯ ಅವಯವಗಳು ಹೇಗೆ ಸಮಾನವೋ ಸಮಾಜದಲ್ಲಿಯು ಪ್ರಾರೂ ಅಷ್ಟೇ.

ಇದರಲ್ಲಿ ರಾಜಕುಮಾರ, ರೈತ, ಹಣವಂತ, ಬಡವ, ಅಧಿಕಾರಿ, ಸೇವಕ, ಎಲ್ಲರೂ ಒಂದೇ ಅಂತಸ್ತಿನಲ್ಲಿರುತ್ತಾರೆ. ಒಂದು ಮಾತಿನಲ್ಲಿ ಹೇಳಬೇಕೆಂದರೆ ಸೋಷಿಲಿಜಂನಲ್ಲಿ ದ್ವೈತವಿಲ್ಲ, ಎಲ್ಲವೂ ಅದ್ವೈತ. ಇವನು ಹಿಂದೂ, ಇವನು ಮುಸ್ಲಿಂ, ಇವನು ಕ್ರೈಸ್ತ, ಇವನು ಸಿಕ್ ಎಂಬ ಭೇದಗಳಿರುವುದಿಲ್ಲ ; ....

o o

ನಾವೆಲ್ಲರೂ ಒಂದು ಬಗೆಯಲ್ಲಿ ಕಳ್ಳರೆಂದು ನನ್ನ ಅಭಿಪ್ರಾಯ. ನನಗೆ ಈಗಲೇ ಅವಶ್ಯಕವಿಲ್ಲದ ಪದಾರ್ಥಗಳನ್ನು ಬಚ್ಚಿಟ್ಟುಕೊಂಡಲ್ಲಿ ಅದು ಕಳ್ಳತನವೇ : ಇನ್ನೊಬ್ಬರಿಗೆ ಅದು ಇಲ್ಲದಂತೆ ಮಾಡುತ್ತೇನೆ. ಪ್ರಕೃತಿಯು ತಪ್ಪದೆ ನನಗೆ ಬೇಕಾದುದನ್ನು ಎಲ್ಲರಿಗೂ ಒದಗಿಸುತ್ತದೆ : ತನಗೆ ಎಷ್ಟು ಅವಶ್ಯಕವೋ ಅಷ್ಟು ಮಾತ್ರ ಗ್ರಹಿಸಿ ಮಿಕ್ಕಿದ್ದನ್ನು ಬಿಟ್ಟಬಿಟ್ಟರೆ ಪ್ರಪಂಚದಲ್ಲಿ ದಾರಿದ್ರ್ಯವಿರುವುದಿಲ್ಲ : ಆಹಾರವಿಲ್ಲದೆ ಯಾರೂ ಸಾಯುವುದಿಲ್ಲ.

At Opera

ಆಮೋಘ 2 ನೇ ವಾರ

ಚಿನ್ನಪ್ಪ, ಟಿ ಆರ್. ರಾಜಕುಮಾರಿ ಕೃಷ್ಣ, ಮಧುರಂ ಪಾತ್ರವಹಿಸಿರುವ

ಕುಬೇರ ಕುಚೇಲ

(ತಮಿಳು)

Save the Cow

ಗೋ ವಧೆ ನಿಲ್ಲಲಿ

Edited, Printed and P... by M S Krishna Ra...
Satyavadi Press
Agrahar, Mysore

ತಾ॥ 15-3-48 ॥ಶ್ರೀ॥ ನಂ. 79

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ದೇವಾಲಯ ಪ್ರವೇಶ

(ಕಳೆದ ಸಂಚಿಕೆಯಿಂದ ಮುಂದುವರಿದುದು)

(೮) ಸ್ಪೃಶ್ಯಾಸ್ಪೃಶ್ಯದ ಜಗಳವು ಈ ಪತಿತ ಹಿಂದೂ ಜಾತಿಯನ್ನು ಬಿಟ್ಟು ಎಲ್ಲಿಯೂ ಇಲ್ಲವೆಂಬ ಆಕ್ಷೇಪ. ಇದಕ್ಕೆ ಉತ್ತರ— ಸ್ಪೃಶ್ಯಾಸ್ಪೃಶ್ಯವನ್ನು ಮನ್ನಿಸಿದ್ದರಿಂದ ಈ ಜಾತಿಯು ಪತಿತವಾಗಿಲ್ಲ.

ಪ್ರಕೃತಿಯ ಕಾರ್ಯವಾದ ಈ ಪ್ರಪಂಚವು ಜೀವರ ಭೋಗ ಮತ್ತು ಮೋಕ್ಷಕ್ಕಾಗಿ ಇದೆ ಪ್ರಾಣಿಗಳ ಕರ್ಮಗಳಲ್ಲಿ ವೈಚಿತ್ರ್ಯವಿರುವುದರಿಂದ ಪ್ರಪಂಚದಲ್ಲಿ ವೈಚಿತ್ರ್ಯವಿರುತ್ತದೆ; ಆ ಕರ್ಮಗಳಿಗನುಸಾರವಾಗಿ ಜೀವರಿಗೆ ಶರೀರ ಸಿಕ್ಕಿದೆ. ಯಾವ ರೀತಿ ಮನುಷ್ಯನ ಸ್ಥೂಲ ಶರೀರದಲ್ಲಿ ರೋಗಗಳಾಗುತ್ತವೆಯೋ, ಅದೇ ರೀತಿ ಮಾನಸಿಕ ಶರೀರದಲ್ಲಿಯೂ ರೋಗಗಳಾಗುತ್ತವೆ. ಯಾವ ಪ್ರಕಾರ ಶಾರೀರಿಕ ರೋಗಗಳ ಚಿಕಿತ್ಸೆಗಾಗಿ ವೈದ್ಯಕಶಾಸ್ತ್ರವಿದೆಯೊ ಅದೇ ಪ್ರಕಾರ ಮಾನಸಿಕ ರೋಗಗಳ ಚಿಕಿತ್ಸೆಗಾಗಿ ಧರ್ಮಶಾಸ್ತ್ರವಿದೆ.

ಮಾನಸಿಕ ರೋಗದಲ್ಲಿರುವ ವೈಚಿತ್ರ್ಯವೇನೆಂದರೆ, ರೋಗಿಗೆ ಸ್ವಯಂ ತಾನು ರೋಗಿ ಎಂಬುವುದು ಗೊತ್ತಾಗುವುದಿಲ್ಲ. ಶಾಸ್ತ್ರದೃಷ್ಟಿಯಿಂದ ಅವನ ರೋಗದ ಸುಳಿವು ಸಿಗುತ್ತದೆ ಹಾಗೂ ಚಿಕಿತ್ಸೆಯಾಗುತ್ತದೆ.

ಆದ್ದರಿಂದ ಎಲ್ಲಾ ಚಿಕಿತ್ಸಾಶಾಸ್ತ್ರಗಳ ವಿಜ್ಞಾನವನ್ನು ಆಲೋಚನೆಮಾಡುವರೋ ಆ ರೋಗಗಳ ತಾರತಮ್ಯದ ವಿಚಾರವನ್ನು ಮಾಡಬೇಕಾಗುತ್ತದೆ. ಬೇರೆಬೇರೆ ರೋಗಗಳಿಗೆ ಬೇರೆಬೇರೆ ಔಷಧಿ ಬೇರೆ ಪಥ್ಯವಿಧಾನವೂ ಇದೆ. ಕೆಲವು ರೋಗಗಳು ಅಂಟುರೋಗಗಳಾಗಿಕೊಂಡಿವೆ, ಮುಟ್ಟುವುದರಿಂದ ರೋಗಗಳು ಬೇರೆಯವರಲ್ಲಿ ಅಂಟಿಕೊಳ್ಳುತ್ತವೆ. ಆದ್ದರಿಂದ ಈ ಸಾಂಕ್ರಾಮಿಕ ರೋಗದ ರೋಗಿಗಳನ್ನು ಸ್ಪರ್ಶಿಸುವುದು ನಿಷಿದ್ಧವಾಗಿದೆ, ಆದ್ದರಿಂದ ಎಷ್ಟೋ ಸ್ಪೃಶ್ಯ ರೋಗಿಗಳಿರುವರು, ಎಷ್ಟೋ ಅಸ್ಪೃಶ್ಯರಿರುವರು; ಹಾಗೂ ಎಷ್ಟೋ ಮಂದಿಗಳ ಸ್ಪೃಶ್ಯತೆಯಲ್ಲಿ ತಾರತಮ್ಯವಿದೆ

ನಮ್ಮ ಔಷಧಾಲಯದಲ್ಲಿ ಎಲ್ಲಾ ರೋಗಿಗಳಿಗೆ ಒಂದೇ ಔಷಧ ಕೊಡಲಾಗುವುದೆಂದು ತಿಳಿವಳಿಕೆಯಿಲ್ಲದ ಮನುಷ್ಯನು ಮಾತ್ರ ಕೊಚ್ಚಿಕೊಂಡಾನು; ನಮ್ಮ ಔಷಧಾಲಯದಲ್ಲಿ ಸಾಂಕ್ರಾಮಿಕವೆಂಬ ರೋಗವೇ ಮನ್ನಿಸಲ್ಪಡುವುದಿಲ್ಲವೆಂದು ಪರಮ ಅಜ್ಞಾನಿಯು ಮಾತ್ರ ಹೆಮ್ಮೆಪಟ್ಟಾನು.

ಆದಕಾರಣ ಯಾವ ಮತಗಳು ವಿಜ್ಞಾನ ಮೂಲಕವಾಗಿಲ್ಲವೋ, ಅವಂಲ್ಲಿ ಎಲ್ಲರಿಗಾಗಿ ಒಂದೇ ನಿಯಮವಿರುವುದು ಹಾಗೂ ಅಸ್ಪೃಶ್ಯತೆಯೇ ಇರುವುದಿಲ್ಲ. ಆದರೆ ಹಿಂದೂಧರ್ಮದವರಲದಲ್ಲಿ ಜ್ಞಾನವಿಜ್ಞಾನವಿದೆ. ಆದ್ದರಿಂದ ಇಲ್ಲಿ ಅನುಷ್ಠಾನದಲ್ಲಿ ತಾರತಮ್ಯವೂ ಸ್ಪೃಶ್ಯಾಸ್ಪೃಶ್ಯ ವಿವೇಕವೂ ಅನಿವಾರ್ಯವಾಗಿದೆ.

ಆದುದರಿಂದ ವೈಷಮ್ಯ ತಾರತಮ್ಯ ಮುಂತಾದ ಈ ಜಾತಿಯ ಯುತಾರ್ಥ ಧರ್ಮಗಳು ಕೌಶಲವನ್ನು ಸೂಚಿಸುವುದೇ ಹೊರತು ಪಾತಿತ್ಯದ ದೋಷಗಳಲ್ಲ.

(೯) ವಿಧರ್ಮಿಗಳನ್ನು ನೀವು ಮುಟ್ಟುತ್ತೀರಿ, ಹಾಗೂ ಸ್ವಧರ್ಮಿಗಳನ್ನು ಅಸ್ಪೃಶ್ಯರನ್ನಾಗಿ ಮಾಡಿರುವಿರಿ ಎಂಬ ಪ್ರಶ್ನೆಗೆ, ಸ್ಪೃಶ್ಯರನ್ನಾಗಲೀ ಅಸ್ಪೃಶ್ಯರನ್ನಾಗಲೀ ನಾವು ಮಾಡಿದವರಲ್ಲ. ಯಾವುದನ್ನು ಧರ್ಮಶಾಸ್ತ್ರ ಹೇಗೆ ಹೇಳಿದೆಯೋ ಅದು ಹಾಗೆ ಇದೆ. ನಾವು ಧರ್ಮಶಾಸ್ತ್ರಾನುಸಾರ ನಡೆಯುವಂತೆ ಪ್ರಯತ್ನ ಮಾಡುವವರು.

ಕೆಲ ಜನರು ಈ ನಿಯಮವನ್ನು ಯಥಾರ್ಥ ರೂಪದಿಂದ ಪಾಲಿಸಲಾರರಾಗಿರುವರೆಂಬುದಂಲ್ಲಿ ಸಂಶಯವಿಲ್ಲ. ಅಂದರೆ ಸಂಧ್ಯಾಪೂಜೆಗಳು ಮಾಡಲಿಲ್ಲದಿರುವಾಗ, ಕೆಲಸಬಿದ್ದಾಗ ಮುಸಲ್ಮಾನ ಅಥವಾ ಕ್ರೈಸ್ತರನ್ನು ಮುಟ್ಟುತ್ತಾನೆ. ಆದರೆ ಯಾರು ಹೀಗೆ ಮಾಡುವರೋ ಅವರು ಅಸ್ಪೃಶ್ಯರನ್ನೂ ಇಂತಹ ಸಂದರ್ಭದಲ್ಲಿ ಮುಟ್ಟಬಹುದು. ಆದರೆ ಅವರು ಮುಟ್ಟದಿರುವ ಕಾರಣ ಅಸ್ಪೃಶ್ಯರ ಮಲಿನಾಧಿಕ್ಯವಾಗಿದೆ.

(೧೦) ಅಸ್ಪೃಶ್ಯರು ನಮ್ಮಿಂದ ಬೇರ್ಪಟ್ಟಲ್ಲ ನಮ್ಮ ಸಂಖ್ಯೆಯು ತಗ್ಗುವುದು ಎಂದು ಹೇಳಬಹುದು. ಆದರೆ ಕೇವಲ ಸಂಖ್ಯೆಯ ಹೆಚ್ಚಿಕೆಯಿಂದ ಯಾವ ಕೆಲಸವೂ ಆಗುವುದಿಲ್ಲ. ಹಿಂದೂ ಧರ್ಮದಲ್ಲಿ, ಅದರಲ್ಲಿ ಉಪೇಕ್ಷೆಯಿಡುವವರ ಸಂಖ್ಯೆಯೇ ಈಗ ಅಧಿಕವಾಗಿದೆ, ಆದ್ದರಿಂದ ನಾವು ನಮಗಿಂತ ಅಲ್ಪ ಸಂಖ್ಯಾಕ (ಅಪೇಕ್ಷಿತಾ ಸಂಘಟಿತ) ವಾದ ಸಮಾಜದಿಂದ ಸೋತುಹೋಗುವೆವು. ಒಂದುವೇಳೆನಮ್ಮಲ್ಲಿ ಇಂತಹ ಜನರನ್ನು ನಮ್ಮ ಸಮಾಜದಿಂದ ಹೊರ ಹಾಕಲು ಶಕ್ತಿಯಿರುತ್ತಿದ್ದರೆ, ಅಲ್ಪಸಂಖ್ಯಾಕರಾದಾಗ್ಯೂ ನಾವು ಇತರರ ಅನಾದಶದ ವಸ್ತುವರಿಗಿ ಗಣಿಸಲ್ಪಡುತ್ತಿದ್ದಿಲ್ಲ, ನಮ್ಮ ಸಮಾಜವು ದಿನದಿನಕ್ಕೆ ಉಚ್ಚೃಂಖಲಿತವಾಗಿ ಹೋಗುತ್ತಿರಲಿಲ್ಲ.

ಇನ್ನೊಂದೇನೆಂದರೆ ನಾವೇ ಅವರ ಬಿನ್ನು ಹಿಡಿಯದಿದ್ದಲ್ಲಿ ಅವರು ನಮ್ಮಿಂದ ಬೇರಾಗುವುದಿಲ್ಲ. ಏಕೆಂದರೆ ನಮಗೂ ಅವರಿಗೂ ಪ್ರೀತಿಯಿದೆ. ಮುಸಲ್ಮಾನೀ ರಾಜ್ಯದ ಸಮಯದಲ್ಲಿಯೂ ಅವರು ಪ್ರಲೋಭನಕ್ಕೊಳಗಾಗಲಿಲ್ಲ ಅವರು ನಮ್ಮನ್ನು ಬಲ್ಲರು ನಾವು ಅವರನ್ನು ಬಲ್ಲೆವು. ಅವರಿಗೆ ಸುಖಸಂಪತ್ತನ್ನು ಕೊಡಬಲ್ಲ ಸಮಾಜವಾವುದೂ ಇಲ್ಲ; ಕ್ರೈಸ್ತರಾದಾಗ್ಯೂ ಅವರಿಗೆ ಗೋರಿಸ್ಥಾನದಲ್ಲಿ ಸ್ಥಾನ ಸಿಗದು, ಮಸೀಹನ ನಮ್ಮ ಸತ್ಯವೆನ್ನುತ್ತಾ ಮರಣ ಘಟ್ಟಕ್ಕೇ ಬಂದೇಕಾಗುತ್ತದೆ ಮುಸಲ್ಮಾನರಂತೂ ಅವರು ಹಂದಿ ಮಾಂಸ ಭಕ್ಷಣ ಬಿಡಬೇಕಾಗುವುದು. ಬಾಯಿಯಿಂದ ಬೇಕಾದರೆ ಯಾರು ಏನೇ ಹೇಳಲಿ ಸಮಾನ ವ್ಯವಹಾರ ಮಾಡುವುದು ತಪ್ಪಲ್ಲ

ಮತ್ತೆ ಯಾವ ಸುಖಕ್ಕಾಗಿ ನಮ್ಮನ್ನು ಬಿಡುವರು? ನಿರಾಕಾರ ಬ್ರಹ್ಮದಿಂದ ಹಿಡಿದು, ಪರ್ವತ ನದೀ ಭೂತ ಪ್ರೇತಗಳ ವರೆಗಿನ ಪೂಜೆಮಾಡುವವರಿಗೂ ನಮ್ಮಲ್ಲಿ ಅವಕಾಶವಿದೆ; ಕ್ರೈಸ್ತ ಅಥವಾ ಮುಸ್ಲಿಂ ಧರ್ಮವನ್ನು ಸ್ವೀಕರಿಸಿದಲ್ಲಿ ಅವರು ಪ್ರೇತ ಪೂಜೆಯನ್ನು ಬಿಡಬೇಕಾಗುವುದು: ಆದರೆ ಇದು ಅವರ ಸಾಮರ್ಥ್ಯಕ್ಕೆ ತೀರಾ ಎಕ್ಕಿದುದು. ಆದ್ದರಿಂದ ಅವರು ನಮ್ಮನ್ನು ನಿರಾಯಾಸವಾಗಿ ಬಿಡಲಾರರು

ಒಂದುವೇಳೆ ಯಾದರೂ ನಮ್ಮನ್ನು ಸಂಖ್ಯೆ ಕಮ್ಮಿಯಾಗುವ ಧರ್ಮವನ್ನು ಬಿಡುವುದು ನಮಗೆ ಸಹ್ಯವಾಗಿಲ್ಲ. ಸ್ಪಷ್ಟ ವಿಷಯವೇನೆಂದರೆ, ಒಂದುವೇಳೆ ನಾವು ಪ್ರಪಂಚದ ತಿರೆಯಿಂದ ಅಳಿದು ಹೋಗುವುದಾದರೂ ಕೂಡ ಧರ್ಮಕ್ಕಾಗಿ ಇದು ನಮಗೆ ಸ್ವೀಕಾರವು. ಧರ್ಮವನ್ನು ಬಿಟ್ಟು ರಾಜ್ಯಸಿಂಹಾಸನವೂ ಸ್ವೀಕಾರವಲ್ಲ. ಭಗವದ್ಗೀತೆಯು ನಮ್ಮದು, ಏಕೆಂದರೆ—

'ಯದಾ ಯದಾ ಹಿ ಧರ್ಮಸ್ಯ ಗ್ಲಾನಿ
ರ್ಭವತಿ ಭಾರತ।
ಅಭ್ಯುತ್ಥಾನವ ಧರ್ಮಸ್ಯ ತದಾತ್ಮಾ
ನಂ ಸೃಜಾಮ್ಯಹಮ್' ॥

ಎಂಬುದರಲ್ಲಿ ನನಗೆ ವಿಶ್ವಾಸವಿದೆ.

ಭುಜಬಲದಿಂದಲೇ ಆಗಲಿ ಕಾನೂನು ಬಲದಿಂದಲೇ ಆಗಲಿ, ಧರ್ಮಾನುಶಾಸನಕ್ಕೆ ವಿರುದ್ಧವಾಗಿ ಯಾರೂ ದೇವಾಲಯದೊಳಹೊಗ್ಗುವುದನ್ನು ನಾವು ಒಪ್ಪಲಾರೆವು, ನಮ್ಮ ಕೈಸಾಗದಿದ್ದಾಗ ನಾವು ದೇವಾಲಯವನ್ನು ಬಿಟ್ಟು ಬಿಡುವೆವು: ನಮ್ಮ ಮನೆಯಲ್ಲಿ ಪೂಜೆಮಾಡಿಯೇ ತೃಪ್ತರಾಗುವೆವು; ಆದರೆ ಈ ಔರಂಗಜೇಬೀ ಬಲಪ್ರಯೋಗದ ಫಲವು ಒಳ್ಳೆಯದಾಗದು.

'ದೇವರು ಎಲ್ಲರಿಗೂ ಒಬ್ಬನೇ' ಆದರೆ ದೇವರ ಆರಾಧನೆಯ ಸಾಧನವು ಎಲ್ಲರಿಗೂ ಒಂದೇ ಅಲ್ಲ, ಆಗಲೂ ಆರದು. ಅಧಿಕಾರಾನುಸಾರವಾಗಿ ಆರಾಧನೆಯ ಸಾಧನಗಳಲ್ಲಿ ಭೇದವಿರುವುದು ಸ್ವಾಭಾವಿಕ- ಈ ಸಾಧನಗಳು ಪ್ರಾಣಕ್ಕಿಂತಲೂ ಪ್ರಿಯವಾದುವು, ಆದ್ದರಿಂದ ಇದರ ಮೇಲೆ ಒಲಪ ಯೋಗವು ಸರ್ವಥಾ ಅಸಹ್ಯ. ದೇವರನ್ನು ಒಬ್ಬನೇ ಇರಲಿಕ್ಕೆ ಬಿಡಿ: ಆದರೆ ಅವನ ಪ್ರಾಪ್ತಿಯ ಸಾಧನಗಳನ್ನು ಬಲವೂರ್ವಕವಾಗಿ ಬಂದುಮಾಡುವ ಪ್ರಯತ್ನ ಮಾಡಬೇಡಿರಿ.

'ದೇವರು ಎಲ್ಲರಿಗೂ ಒಬ್ಬನೇ' ಎಂಬ ಸಿದ್ಧಾಂತಕ್ಕಿಂತ 'ಎಲ್ಲರೂ ಒಬ್ಬನೇ ಆದ ದೇವರವರು' ಎಂಬ ಸಿದ್ಧಾಂತವು ಉಪಯುಕ್ತವಾಗುತ್ತಿತ್ತು.

ಭಗವಾನ್ ದೀನಾನಾಥ ಆಶರಣ ಶರಣನು ಈ ದೀನ ಭಾರತದ ಮೇಲೆ ಕರುಣೆಯಿಡಲಿ; ಹಾಗೂ ನಮ್ಮೆಲ್ಲರಿಗೂ ಸುಬುದ್ಧಿ ಕೊಡಲಿ, ಇಷ್ಟೇ ನಮ್ಮ ಪ್ರಾರ್ಥನೆ.

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
'ಪ್ರಬೋಧ' ಪುಟದಿಂದೊಡಗೂಡಿದ
ಸೋಮವಾರ ಸಂಚಿಕೆ ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ